**ಅಸಲು ದಾವಾ ಸಂಖ್ಯೆ: - 34/2018 ಪಿ.ಡಬ್ಲ್ಯೂ.:-3**

ದಿನಾಂಕಃ **29.05.2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು:- 1 ನೇ ಪ್ರತಿವಾದಿ ಪರ ಶ್ರೀ ಜಿ ಎಸ್ ಆರ್ ವಕೀಲರಿಂದಃ-**

ವಾದಿ ನನ್ನ ತಮ್ಮನ ಹೆಂಡತಿ. ವಾದಿ ನನ್ನ ತಮ್ಮನ ಹೆಂಡತಿಯಾಗಿದ್ದರಿಂದ ವಾದಿಗೆ ಅನುಕೂಲ ಮಾಡುವ ಉದ್ದೇಶದಿಂದ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ವಾದಿಯರ ತಮ್ಮಂದಿರು ಎಂದರೆ ಸರಿ. ವಾದಿಯ ತಂದೆಗೆ ಯಾವ ಯಾವ ಸ್ವತ್ತುಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ವಾದಿಯ ತಂದೆ-ತಾಯಿ ವಾದಿಗೆ ದಾವಾ ಸ್ವತ್ತು 1 ನ್ನು ವಿಲ್ ಬರೆದುಕೊಟ್ಟಿರುತ್ತಾರೆ. ನನ್ನ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನು ಮತ್ತು ವಾದಿ ನೀಡಿರುತ್ತೇವೆ. ನನ್ನ ಪ್ರಮಾಣ ಪತ್ರದಲ್ಲಿ ವಿಲ್ ಬಗ್ಗೆ ಬರೆಸಿರುತ್ತೇನೆ. ದಾವಾ ಸ್ವತ್ತಿನಲ್ಲಿ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ತಮ್ಮನ ಹೆಂಡತಿಯಾಗಿದ್ದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳಿಗೆ ಪೌತಿ ಆಧಾರದ ಮೇಲೆ 1991-92 ರಲ್ಲಿ ದಾವಾ ಸ್ವತ್ತುಗಳು ಬಂದಿರುತ್ತವೆ ಎಂದರೆ ಸರಿ. ನಂತರ ದಾವಾ ಸ್ವತ್ತುಗಳನ್ನು 1998 ರಲ್ಲಿ 2 ಮತ್ತು 3 ನೇ ಪ್ರತಿವಾದಿಯರು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು ಮಾರಾಟ ಮಾಡಿದ ನಂತರ ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳಲ್ಲಿ ಯಾವ ವರ್ಷದಿಂದ ಸ್ವಾಧೀನದಲ್ಲಿದ್ದಾರೆಂದು ನನಗೆ ಗೊತ್ತಿಲ್ಲ. 1998 ರಿಂದ 1 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ

ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ.ನನಗೆ ದಾವೆಯ ಬಗ್ಗೆಯಾಗಲೀ, ದಾವಾ ಸ್ವತ್ತಿನ ಬಗ್ಗೆಯಾಗಲೀ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1998 ರಿಂದ ದಾವಾ ಸ್ವತ್ತುಗಳಿಗೆ 1 ನೇ ಪ್ರತಿವಾದಿಯೇ ಮಾಲೀಕನಾಗಿರುತ್ತಾನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಹೊನ್ನಾಳಿ.**